**ಓ.ಎಸ್. ನಂ. 59/2023** **ಪಿ.ಡಬ್ಲ್ಯೂ- 3**

**ಸಾಕ್ಷಿಯನ್ನು ದಿನಾಂಕ 4.7.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ1 ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು 1 ಮತ್ತು 2 ನೇ ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿದಾರರು ನಿಪಿ1 ರಲ್ಲಿರುವ 1 ಮತ್ತು 2 ನೇ ಪ್ರತಿವಾದಿಯರ ತಲಾ 4 ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ1 ಬಿ ಮತ್ತು ನಿಪಿ1 ಸಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಡಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀಮತಿ ಎನ್.ಎಸ್ ವಕೀಲರಿಂದಃ

ನನಗೆ ವಾದಿ, ಪ್ರತಿವಾದಿಯರು ಹಾಗೂ ವಾದಿಯ ಯಜಮಾನರಾದ ಸ್ವಾಮಿಯ ಪರಿಚಯವಿರುತ್ತದೆ. ಅವರು ಕಳೆದ 10 ವರ್ಷದಿಂದ ಪರಿಚಯವಿರುತ್ತಾರೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ವ್ಯಕ್ತಿಗಳು ನಾನು ಮತ್ತು ವಾದಿಯ ಗಂಡ ಸ್ವಾಮಿಯಾಗಿರುತ್ತೇವೆ. ಸದರಿ ಭಾವಚಿತ್ರವನ್ನು ನೋಂದಣಿ ಕಛೇರಿಯಲ್ಲಿ ತೆಗೆಯಲಾಗಿರುತ್ತದೆ, ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು, ಸದರಿ ಭಾವಚಿತ್ರಕ್ಕೆ ಸಂಬಂಧಿಸಿದ ಪೆನ್‌ಡ್ರೈವನ್ನು ನಿಡಿ1 ಎ ಎಂದು ಗುರುತಿಸಲಾಯಿತು. ನಾನು ನೋಂದಣಿ ಕಛೇರಿಯಲ್ಲಿ ಇ.ಸಿ ಕೆಲಸ ಕೊಡುವ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ಪತ್ರ ಬರಹಗಾರರಾದ ಮಾಸ್ತಯ್ಯ ನವರ ಪರಿಚಯವಿರುತ್ತದೆ. ಅವರ ಕಛೇರಿಯು ನೋಂದಣಿ ಕಛೇರಿಯ ಮುಂಭಾಗದಲ್ಲಿರುತ್ತದೆ ಎಂದರೆ ಸರಿ. ಈ ದಿನ ನನ್ನನ್ನು ವಾದಿಯ ಗಂಡ ನೋಂದಣಿ ಕಛೇರಿಯಿಂದ ಸಾಕ್ಷಿ ನುಡಿಸಲು ಕರೆ ತಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನಾನೇ ಬಂದಿರುತ್ತೇನೆ ಎನ್ನುವರು. ನಾನು ಹೆಚ್.ಡಿ.ಕೋಟೆಯ ನೋಂದಣಿ ಕಛೇರಿಯಲ್ಲಿ ದಾಖಲಾತಿಗಳಿಗೆ ಮತ್ತು ಇ.ಸಿ ಗಳಿಗೆ ಸೀಲ್ ಹಾಕಿಕೊಡುವ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಇದೇ ರೀತಿ ಹಲವು ದಾಖಲೆಗಳಿಗೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ದಾಖಲೆಯಾದ ದಿನಾಂಕ ನನಗೆ ಗೊತ್ತಿರುವುದಿಲ್ಲ. ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಯಾವ ದಾಖಲೆ ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ರಾಜು ರವರ ಮಗ ಸೋಮು ಮತ್ತು ನಾನು ಕೂಲಿ ಕೆಲಸಕ್ಕೆ ಒಟ್ಟಿಗೆ ಹೋಗುತ್ತಿದ್ದರಿಂದ ಅವರ ಪರಿಚಯವಿರುತ್ತದೆ. ನಿಪಿ1 ದಾಖಲೆಯನ್ನು ಮಾಸ್ತಯ್ಯ ಎಂಬ ಪತ್ರ ಬರಹಗಾರರು ಬರೆದಿರುತ್ತಾರೆ. ನಿಪಿ1 ದಾಖಲೆಯನ್ನು ಬರೆದಾಗ

ನಾನು, ವಾದಿ, ಪ್ರತಿವಾದಿಯರು, ಭಾಗ್ಯ, ಸಾಕ್ಷಿ ಸೋಮ ಹಾಜರಿದ್ದೆವು. ನಿಪಿ1 ದಾಖಲೆಯನ್ನು ಬರೆಯುತ್ತಿದ್ದಾಗ ನಾವು ಅಲ್ಲಿ ಹಾಜರಿದ್ದೆವು. ನಿಪಿ1 ರಲ್ಲಿರುವ ವಿಚಾರವನ್ನು ಪತ್ರ ಬರಹಗಾರರು ಬರೆದಿರುತ್ತಾರೆ. ಮಾಸ್ತಯ್ಯ ರವರು ನಿಪಿ1 ದಾಖಲೆಯನ್ನು ತಯಾರಿಸಿ ನೋಂದಣಿ ಕಛೇರಿಗೆ ಹೋಗಿ ನೋಂದಣಿ ಮಾಡಿಸಿ ಸದರಿ ಪತ್ರವನ್ನು ವಾದಿಗೆ ಕೊಡುವವರೆಗೂ ಜೊತೆಯಲ್ಲಿದ್ದರು. ನಾನು, ವಾದಿ, ವಾದಿಯ ಗಂಡನಾದ ಸ್ವಾಮಿ, ಸಾಕ್ಷಿದಾರರಾದ ಸೋಮು ರವರು ಸೇರಿಕೊಂಡು ಸಾಲದ ಭದ್ರತೆಗಾಗಿ ಆಧಾರಪತ್ರ ಬರೆದುಕೊಡಲು ಬಂದಾಗ ಅವರಿಗೆ ಮೋಸ ಮಾಡಿ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನೋಂದಣಿ ಕಛೇರಿಯಲ್ಲಿ ಸೀಲ್ ಹಾಕುವ ಕೆಲಸ ಮಾಡುತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಬರೆದಿರುವ ವಿಚಾರ ಗೊತ್ತಿರುತ್ತದೆ. ನಿಪಿ1 ರಲ್ಲಿ ಬರೆದಿರುವ ಆಸ್ತಿಯ ವಿಸ್ತೀರ್ಣ, ಚಕ್ಕುಬಂದಿ ಮತ್ತು ಇತರ ವಿವರಗಳು ನನಗೆ ಗೊತ್ತಿರುವುದಿಲ್ಲ. ಕ್ರಯದ ಮಾತುಕತೆಯು ನನ್ನ ಸಮಕ್ಷಮ ಆಗಿರುತ್ತದೆ. ಸದರಿ ಸಮಯದಲ್ಲಿ ನಾನು, ವಾದಿಯ ಗಂಡ, 1 ನೇ ಪ್ರತಿವಾದಿ ಇದ್ದೆವು. ಮಾತುಕತೆಯು ನಿಪಿ1 ಆದ ದಿನವೇ ಆಗಿರುತ್ತದೆ. ನನ್ನ ಸಮಕ್ಷಮ 5 ಲಕ್ಷ ಹಣವನ್ನು ವಾದಿಯು 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ಪ್ರತಿವಾದಿಯರು ಯಾವುದೇ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ಅವರು ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ1 ದಾಖಲೆಯಾದಾಗ ಆಸ್ತಿಯ ಮಾರುಕಟ್ಟೆ ಮೌಲ್ಯ ಎಷ್ಟಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ1 ರಲ್ಲಿ ಪ್ರತಿವಾದಿಯರು, ವಾದಿಯ ಹೆಸರು ನಮೂದಾಗಿರುತ್ತದೆ. ನನಗೆ ವಾದಿ ಪ್ರತಿವಾದಿಯರ ಕುಟುಂಬದ ವಿಚಾರ ಗೊತ್ತಿರುವುದಿಲ್ಲ. ನಿಪಿ1 ರಲ್ಲಿ ಪ್ರತಿವಾದಿಯರ ಮಕ್ಕಳ ಹೆಸರು ನಮೂದು ಮಾಡಿರುವ ಬಗ್ಗೆ ಈಗ ನೆನಪಿರುವುದಿಲ್ಲ. ನಿಪಿ1 ದಾಖಲೆಗೆ ಪ್ರತಿವಾದಿಯರ ಮಕ್ಕಳು ಸಹಿ ಮಾಡಿರುವುದಿಲ್ಲ. ನಾನು ಮತ್ತು ವಾದಿಯ ಗಂಡ ಸ್ನೇಹಿತರಾಗಿರುವುದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವ ಉದ್ದೇಶಕ್ಕೆ ಹಣ ಪಡೆದು ನಿಪಿ1 ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.